## ನಿಮ್ಮೊಡನೆ

# ಮಕ್ಕಳ ಹಕ್ಕುಗಳಲ್ಲಿ ಚೌಕಾಸಿ ಬೇಡ

ಜಗತ್ತಿನ ಆರು ಮಕ್ಕಳಲ್ಲೊಂದು ಮಗು ಭಾರತದಲ್ಲಿದೆ. ವಿಶ್ವದಲ್ಲಿ ಅತಿ ಹೆಚ್ಚು ಮಕ್ಕಳನ್ನು ಹೊಂದಿರುವ ಭಾರತ ಮಕ್ಕಳ ಹಕ್ಕುಗಳ ರಕ್ಷಣೆಗೆ ಹೇಳಿಕೊಳ್ಳುವಂತಹ ಆದ್ಯತೆಯನ್ನೇನೂ ನೀಡಿಲ್ಲ.

‘ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದಂತೆ ಚೌಕಾಸಿಯ ಪ್ರಶ್ನೆಯೇ ಸಲ್ಲದು’ ಎಂದು ಸ್ಪಷ್ಟ ಮಾತುಗಳಲ್ಲಿ ಹೇಳಿರುವ ದೆಹಲಿ ಹೈಕೋರ್ಟ್, ಮಕ್ಕಳ ಹಕ್ಕುಗಳ ಕುರಿತಂತೆ ಸಮಾಜಕ್ಕಿರುವ ಮರೆವು– ನಿರ್ಲಕ್ಷ್ಯದ ಕುರಿತು ತೀವ್ರ ಕಳವಳ ವ್ಯಕ್ತಪಡಿಸಿದೆ. ಒಂಬತ್ತು ವರ್ಷಗಳಿಂದ ಸೆರೆಯಲ್ಲಿರುವ ಬಾಲಕನೊಬ್ಬನ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ, ಇಂಥ ಸಂದರ್ಭಗಳಲ್ಲಿ ಪೊಲೀಸರ ನಿರ್ದಯ ವರ್ತನೆ ಕುರಿತಂತೆ ಬೇಸರ ವ್ಯಕ್ತಪಡಿಸಿದೆ. 2007ರ ಜನವರಿ 13ರಂದು ಬಂಧನಕ್ಕೆ ಒಳಗಾಗಿದ್ದ ಬಾಲಕನನ್ನು ಒಂಬತ್ತು ವರ್ಷಗಳ ಕಾಲ ಸೆರೆಯಲ್ಲಿ ಇಡಲಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಪೀಠ ನೋವು ವ್ಯಕ್ತಪಡಿಸಿದ್ದು, ಹೇಯವಾದ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಸಂದರ್ಭದಲ್ಲಿ ಕೂಡ ಅಪ್ರಾಪ್ತ ವಯಸ್ಕರ ಹಕ್ಕುಗಳನ್ನು ಗೌರವಿಸಲೇಬೇಕು ಎಂದು ಹೇಳಿದೆ.

2014ರ ಆಗಸ್ಟ್‌ನಲ್ಲಿ ಕೊಲೆ ಪ್ರಕರಣದಲ್ಲಿ ಭಾಗಿಯಾಗಿದ್ದ ಈ ಬಾಲಕನಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು. ಈ ತೀರ್ಪನ್ನು ಪ್ರಶ್ನಿಸಿದ್ದ ಬಾಲಕ, ಅಪರಾಧ ನಡೆದ ಸಂದರ್ಭದಲ್ಲಿನ ತನ್ನ ವಯಸ್ಸನ್ನು ಪರಿಗಣಿಸುವಂತೆ ನ್ಯಾಯಾಲಯವನ್ನು ಕೋರಿದ್ದ. ಆತನ ಕೋರಿಕೆಯನ್ನು ಮನ್ನಿಸಿರುವ ಹೈಕೋರ್ಟ್, ಬಾಲಾರೋಪಿ ಕಾಯ್ದೆ ಅನ್ವಯ ಗರಿಷ್ಠ ಏಳು ವರ್ಷಗಳಿಗಿಂತಲೂ ಹೆಚ್ಚಿನ ಶಿಕ್ಷೆಗೆ ಕಾನೂನಿನಲ್ಲಿ ಅವಕಾಶ ಇಲ್ಲದಿರುವುದನ್ನು ಪ್ರಸ್ತಾಪಿಸಿದೆ.

ದೆಹಲಿ ಹೈಕೋರ್ಟ್‌ನ ಟೀಕೆ– ಟಿಪ್ಪಣಿ ನಿರ್ದಿಷ್ಟ ಪ್ರಕರಣವೊಂದಕ್ಕೆ ಸಂಬಂಧಿಸಿದ ಹೇಳಿಕೆಯಷ್ಟೇ ಅಲ್ಲ; ಇದು, ಮಕ್ಕಳ ಹಕ್ಕುಗಳನ್ನು ಕುರಿತಂತೆ ಸಮಾಜ ಮಾತ್ರವಲ್ಲ – ಕಾನೂನು ಕೂಡ ಮರೆವು ಇಲ್ಲವೇ ನಿರ್ಲಕ್ಷ್ಯವನ್ನು ತೋರಬಲ್ಲದು ಎನ್ನುವುದನ್ನು ಸೂಚಿಸುವಂತಿದೆ. ಕೊಲೆ, ಅತ್ಯಾಚಾರಗಳಂತಹ ಘೋರ ಅಪರಾಧಗಳಲ್ಲಿ ಪಾಲ್ಗೊಳ್ಳುವ ಮಕ್ಕಳ ಸಂಖ್ಯೆ ಹೆಚ್ಚುತ್ತಿರುವ ಸಂದರ್ಭದಲ್ಲಿ ಬಾಲಾರೋಪಿ ಕಾಯ್ದೆಯ ಕುರಿತಂತೆ ಸಾರ್ವಜನಿಕ ವಲಯದಲ್ಲಿ ಅಸಹನೆ ವ್ಯಕ್ತವಾಗುತ್ತಿದೆ. ದೆಹಲಿಯ ನಿರ್ಭಯಾ ಪ್ರಕರಣದಲ್ಲಿ ಇಂತಹ ಅಸಹನೆ ರೂಪುಗೊಂಡಿದ್ದನ್ನು ನೆನಪಿಸಿಕೊಳ್ಳಬಹುದು. ಈ ಹಿನ್ನೆಲೆಯಲ್ಲಿಯೇ ಅತ್ಯಾಚಾರ– ಕೊಲೆಯಂಥ ಅಪರಾಧಗಳಲ್ಲಿ ಭಾಗಿಯಾಗುವ 16ರಿಂದ 18ರ ವಯೋಮಾನದವರನ್ನೂ ವಯಸ್ಕರೆಂದು ತೀರ್ಮಾನಿಸಿ ಶಿಕ್ಷೆಗೆ ಗುರಿಪಡಿಸುವ ತಿದ್ದುಪಡಿಯನ್ನು ಬಾಲಾರೋಪಿ ಕಾಯ್ದೆಗೆ ಮಾಡಲಾಯಿತು. ಈ ತಿದ್ದುಪಡಿಯನ್ನು ಒಪ್ಪಿಕೊಂಡೇ ಕಾಯ್ದೆಯಲ್ಲಿ ಅಂತರ್ಗತವಾದ ಮಾನವೀಯ ಅಂಶಗಳನ್ನು ಮತ್ತೆ ಮತ್ತೆ ಮನನ ಮಾಡಿಕೊಳ್ಳಬೇಕಾಗಿದೆ. ಈ ಕಾಯ್ದೆಯ ಮುಖ್ಯ ಉದ್ದೇಶ ಮಕ್ಕಳ ಮಾನಸಿಕ ಪರಿವರ್ತನೆಯೇ ಹೊರತು, ಅವರನ್ನು ಶಿಕ್ಷಿಸುವುದಲ್ಲ. ಈ ಉದ್ದೇಶವನ್ನು ಸಮಾಜ ಹಾಗೂ ಕಾನೂನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು ಎನ್ನುವ ಕಿವಿಮಾತನ್ನು ದೆಹಲಿ ಹೈಕೋರ್ಟ್ ಹೇಳಿದೆ.

ಜಗತ್ತಿನ ಆರು ಮಕ್ಕಳಲ್ಲೊಂದು ಮಗು ಭಾರತದಲ್ಲಿದೆ. ವಿಶ್ವದಲ್ಲಿ ಅತಿ ಹೆಚ್ಚು ಮಕ್ಕಳನ್ನು ಹೊಂದಿರುವ ಭಾರತ ಮಕ್ಕಳ ಹಕ್ಕುಗಳ ರಕ್ಷಣೆಗೆ ಹೇಳಿಕೊಳ್ಳುವಂತಹ ಆದ್ಯತೆಯನ್ನೇನೂ ನೀಡಿಲ್ಲ. ಮಕ್ಕಳ ಹಕ್ಕುಗಳು ಈ ಕಾಯ್ದೆಗೆ ಮಾತ್ರ ಸಂಬಂಧಿಸಿಲ್ಲ. ಶಿಕ್ಷಣ, ಆಹಾರ, ಸುರಕ್ಷತೆ, ಸರ್ವಾಂಗೀಣ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಕ್ಕಳಿಗೆ ನಾವು ಎಷ್ಟರಮಟ್ಟಿಗೆ ನ್ಯಾಯ ಸಲ್ಲಿಸಿದ್ದೇವೆ ಎಂದು ಪ್ರಶ್ನಿಸಿಕೊಂಡರೆ, ದೊರೆಯುವ ಉತ್ತರ ಸಭ್ಯ ಸಮಾಜ ತಲೆತಗ್ಗಿಸುವಂತಿರುತ್ತದೆ. ಭಾರತದಲ್ಲಿ ಎರಡೂವರೆ ಕೋಟಿ ಅನಾಥ ಮಕ್ಕಳಿದ್ದಾರೆ ಎನ್ನುವುದು ‘ಯುನಿಸೆಫ್’ ಅಂಕಿ ಅಂಶ. ಪ್ರತಿ ದಿನ ಅಂದಾಜು ಮೂರು ಸಾವಿರ ಮಕ್ಕಳು ಹಸಿವಿನಿಂದ ಸಾಯುತ್ತಿದ್ದಾರೆ ಹಾಗೂ ನೂರಕ್ಕೆ ನಲವತ್ತೈದಕ್ಕೂ ಹೆಚ್ಚು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ ಎನ್ನುವ ಲೆಕ್ಕಾಚಾರಗಳಿವೆ. ವಾಸ್ತವ ಹೀಗಿರುವಾಗ, ಕೋಟ್ಯಂತರ ಮಕ್ಕಳು ತಬ್ಬಲಿಗಳಾಗಿರುವ ಸಂದರ್ಭದಲ್ಲಿ – ವಿಶ್ವಶಾಂತಿ, ಅಭಿವೃದ್ಧಿ, ಸದೃಢ ಆರ್ಥಿಕತೆ ಕುರಿತ ಬೀಸುಹೇಳಿಕೆಗಳು ಕೇವಲ ಬಣ್ಣದ ಮಾತುಗಳಾಗಿಯೇ ಉಳಿಯುತ್ತವೆ. ಈ ಹಿನ್ನೆಲೆಯಲ್ಲಿ, ‘ನಿಜ ಅರ್ಥದಲ್ಲಿ ನಾವು ಶಾಂತಿಯನ್ನು ಹೊಂದಬೇಕಾದರೆ, ಆ ಪ್ರಯತ್ನವನ್ನು ಮಕ್ಕಳಿಂದ ಆರಂಭಿಸಬೇಕು’ ಎನ್ನುವ ಗಾಂಧೀಜಿ ಮಾತನ್ನು ನೆನಪಿಸಿಕೊಳ್ಳಬೇಕು.

ಮಕ್ಕಳ ಹಕ್ಕುಗಳ ಕುರಿತು ಹಿರಿಯರಲ್ಲಿ ಮಾತ್ರವಲ್ಲ, ಎಳೆಯರಲ್ಲಿ ಕೂಡ ಅರಿವನ್ನು ಮೂಡಿಸಬೇಕಾಗಿದೆ. ಕಳೆದ ಆಗಸ್ಟ್‌ನಲ್ಲಿ ಮಹಾರಾಷ್ಟ್ರದ ಹಳ್ಳಿಯೊಂದರ ಮಕ್ಕಳು ಪತ್ರಿಕಾಗೋಷ್ಠಿ ಕರೆದು, ಸ್ಕೂಲ್‌ಬ್ಯಾಗ್‌ಗಳನ್ನು ಹೊರುವ ಸಂಕಷ್ಟದ ಕುರಿತು ಅಳಲು ತೋಡಿಕೊಂಡಿದ್ದರು. ಇಂಥ ಅರಿವು ಎಲ್ಲರದೂ ಆಗುವಂತೆ ಶಿಕ್ಷಕರು ಹಾಗೂ ಪೋಷಕರು ಮಕ್ಕಳನ್ನು ಸಜ್ಜುಗೊಳಿಸಬೇಕಾಗಿದೆ. ಕಾನೂನಿನ ಜತೆ ಸಂಘರ್ಷದಲ್ಲಿರುವ ಮಕ್ಕಳ ಹಕ್ಕುಗಳ ಸಮರ್ಪಕ ಪಾಲನೆಯಿಂದ ಸಮಾಜದ ಆರೋಗ್ಯವೂ ವೃದ್ಧಿಸುತ್ತದೆ. ಹಾಗಾಗಿ, ಮಕ್ಕಳ ಹಕ್ಕುಗಳ ಪಾಲನೆಯ ಬಗ್ಗೆ ಚೌಕಾಸಿ ಮಾಡುವುದೆಂದರೆ, ಅದು ನಮ್ಮ ಒಳಿತಿನ ವಿಷಯಕ್ಕೆ ಸಂಬಂಧಿಸಿದಂತೆ ನಾವು ಮಾಡಿಕೊಳ್ಳುವ ರಾಜಿಯಾಗುತ್ತದೆ.

■ ರಘುನಾಥ ಚ.ಹ.



ಭಾವು